# ಪ್ರಥಮ ದರ್ಜೆಯ ನ್ಯಾಯಿಕ ದಂಡಾದಿಕಾರಿಗಳವರ ನ್ಯಾಯಾಲಯ ಅಫಜಲಪುರ,

ಸಿ.ಸಿ. ನಂಃ 22/2018 ಸಿಡಬ್ಲ್ಯೂಃ11 ಪಿಡಬ್ಲ್ಯೂಃ10

ಪ್ರಮಾಣವಚನ ಬೋಧಿಸಲಾಯಿತು ದಿಃ 14.02.2022

ಹೆಸರು ಃ ಮಂಜುನಾಥ ಧೂಳೇ

ತಂದೆಯ ಹೆಸರು ಃ ಕುಪೇಂದ್ರ

ವಯಸ್ಸು ಃ 40 ವರ್ಷ

ಉದ್ಯೋಗ ಃ Assistant Engineer (A.E.)

ವಾಸಸ್ಥಳ ಃ ಕಲಬುರಗಿ

ಃ ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

ನಾನು 2015 ರಿಂದ 2018 ರ ವರೆಗೆ ಕಿರಿಯ ಅಭಿಯಂತರರು ಎಂದು ಅಫಜಲಪೂರ PWD ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಚಾಸಾ-1 ರವರು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಚಾಸಾ-4 ರವರು ತಹಸೀಲ್ದಾರರು, ಚಾಸಾ-5 ರವರು 2 ನೇ ದರ್ಜೆ ತಹಸೀಲ್ದಾರರು.

ದಿಃ02.12.2016 ರಂದು ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ನಾನು ಚಾಸಾ-1, 4 ರಿಂದ 14 ರವರು ಕೂಡಿ ಬನ್ನಹಟ್ಟಿ ಗ್ರಾಮಕ್ಕೆ ಭೇಟಿ ನೀಡಿದ್ದೆವು. ಸುಮಾರು 11 ಸರ್ವೆ ನಂಬರಗಳಿಗೆ ಭೇಟಿ ಕೊಟ್ಟು ಪರಿಶೀಸಿದಾಗ ಅವುಗಳಲ್ಲಿ ಮರಳು ಸಂಗ್ರಹವಾಗಿದ್ದು, ಸುಮಾರು 6678 ಘನ ಮೀಟರ ಸಂಗ್ರಹವಾಗಿದ್ದು, ಸದರಿ ಮರಳಿನ ಮೊತ್ತ ರೂ.43,40,920/- ಇತ್ತು ಸದರಿ ಸರ್ವೆ ನಂಬರಗಳ ಮಾಲೀಕರು ಆರೋಪಿತರು ಇರುತ್ತಾರೆ. ಸದರಿ ಮರಳನ್ನು ಆರೋಪಿತರು ಅಕ್ರಮವಾಗಿ ಸಂಗ್ರಹಣೆ ಮಾಡಿದ್ದರು.

<u>ಪಾಟೀ ಸವಾಲುಃ</u> ಆರೋಪಿತರ ಪರ ಶ್ರೀ ಎಸ.ಎಸ.ಪಿ. ಹಾಗೂ ಶ್ರೀ ಎಂ.ಎಸ.ಪಿ.ವಕೀಲರಿಂದ

ನಾನು ಘಟನಾ ಸ್ಥಳಕ್ಕೆ ಭೇಟಿ ಕೊಟ್ಟಾಗ ಅಧಿಕಾರಿಗಳನ್ನು ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ. ಸರ್ವೆ ನಂಬರಗಳ ಚೆಕ್ಕ ಬಂದಿ ಹೇಳಲಾಗುವುದಿಲ್ಲ. ಸರ್ವೆ ನಂ.1/2 ಬನ್ನಹಟ್ಟಿ ಗ್ರಾಮದಿಂದ ಯಾವ ದಿಕ್ಕಿಗೆ ಬರುತ್ತದೆ ಎಂದು ಹೇಳಲಾಗುವುದಿಲ್ಲ. ಸರ್ವೆ ನಂಬರಿನಲ್ಲಿ ಬೆಳೆ ಇರಲಿಲ್ಲ. . ಸರ್ವೆ ನಂಬರ 1/2 ರಲ್ಲಿ ಪೂರ್ತಿ ಮರಳು ಇರಲಿಲ್ಲಿ. ಒಂದು ಭಾಗದಲ್ಲಿ ಇತ್ತು. ಯಾವ ಭಾಗದಲ್ಲಿ ಇತ್ತು ಎಂದು ಹೇಳಲಾಗುವುದಿಲ್ಲ. ಕಂದಾಯ ನೀರಿಕ್ಷಕರು ಹಾಗೂ ಗ್ರಾಮ ಲೆಕ್ಕಾಧಿಕಾರಿಗಳು ಗುರುತಿಸಿದ ಮೇರೆಗೆ ಆರೋಪಿಗಳ ಜಮೀನು ನನಗೆ ಗೊತ್ತಾಗಿರುತ್ತದೆ. ಆರೋಪಿಗಳು ವೈಯಕ್ತಿಕವಾಗಿ ಜಮೀನನ್ನು ಉಳುಮೆ ಮಾಡುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ 11 ಸರ್ವೆ ನಂಬರಗಳ ಚೆಕ್ಕ ಬಂದಿ ಹೇಳಲಾಗುವುದಿಲ್ಲ. ಸದರಿ 11 ಸರ್ವೆ ನಂಬರಗಳಲ್ಲಿ ಇದ್ದ ಬೆಳೆಯನ್ನು ಹೇಳಲಾಗುವುದಿಲ್ಲ. ನನಗೆ ಯಾವುದೇ ವಿಷಯ ಗೊತ್ತಿಲ್ಲದಿದ್ದರೂ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣವನ್ನು ಡಿ.ಸಿ. ರವರ ಮಾತನ್ನು ಕೇಳಿ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಭಾವಚಿತ್ರ ತೆಗೆದಿಲ್ಲ. ಚಾಸಾ-8 ರವರ ಮಾತನ್ನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ